ಯಾರು ಸೂರ ಕಹ್ಫ್ನ ಮೊದಲ ಹತ್ತು ವಚನಗಳನ್ನು ಕಂಠಪಾಠ ಮಾಡುತ್ತಾರೋ ಅವರು ದಜ್ಜಾಲ್ನಿಂದ ರಕ್ಷಿಸಲ್ಪಡುತ್ತಾರೆ." ಮತ್ತೊಂದು ವರದಿಯಲ್ಲಿ: "ಸೂರ ಕಹ್ಫ್ನ ಕೊನೆಯ (ಹತ್ತು ವಚನಗಳನ್ನು)

ಅಬೂ ದರ್ದಾಅ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರು ಸೂರ ಕಹ್ಫ್ನ ಮೊದಲ ಹತ್ತು ವಚನಗಳನ್ನು ಕಂಠಪಾಠ ಮಾಡುತ್ತಾರೋ ಅವರು ದಜ್ಜಾಲ್ನಿಂದ ರಕ್ಷಿಸಲ್ಪಡುತ್ತಾರೆ." ಮತ್ತೊಂದು ವರದಿಯಲ್ಲಿ:
"ಸೂರ ಕಹ್ಫ್ನ ಕೊನೆಯ (ಹತ್ತು ವಚನಗಳನ್ನು)." [صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಯಾರು ಸೂರ ಕಹ್ಫ್ನ ಮೊದಲ ಹತ್ತು ವಚನಗಳನ್ನು ಕಂಠಪಾಠ ಮಾಡುತ್ತಾರೋ, ಅವರು ಕೊನೆಯ ಕಾಲದಲ್ಲಿ ಕಾಣಿಸಿಕೊಳ್ಳುವ ಮತ್ತು ಸ್ವಯಂ ದೇವರೆಂದು ವಾದಿಸುವ ಮಸೀಹ್ ದಜ್ಜಾಲ್ನ ಫಿತ್ನಾ (ಪರೀಕ್ಷೆ) ದಿಂದ ರಕ್ಷಿಸಲ್ಪಡುತ್ತಾರೆ, ಕಾಪಾಡಲ್ಪಡುತ್ತಾರೆ ಮತ್ತು ಭದ್ರಪಡಿಸಲ್ಪಡುತ್ತಾರೆ. ಆದಮ್ (ಅವರ ಮೇಲೆ ಶಾಂತಿಯಿರಲಿ) ರನ್ನು ಸೃಷ್ಟಿಸಿದಾಗಿನಿಂದ ಪುನರುತ್ಥಾನ ದಿನದವರೆಗೆ ಭೂಮಿಯ ಮೇಲೆ ಸಂಭವಿಸುವ ಅತಿದೊಡ್ಡ ಫಿತ್ನಾ (ಪರೀಕ್ಷೆ) ಅವನ ಫಿತ್ನಾ ಆಗಿರುತ್ತದೆ. ಏಕೆಂದರೆ ಅಲ್ಲಾಹು ಅವನಿಗೆ ಕೆಲವು ಅದ್ಭುತಗಳನ್ನು ಮಾಡುವ ಶಕ್ತಿಯನ್ನು ನೀಡಿದ್ದು, ಅದರಿಂದಾಗಿ ಅವನ ಹಿಂಬಾಲಕರು ಮರುಳಾಗುತ್ತಾರೆ. ಏಕೆಂದರೆ ಸೂರ ಕಹ್ಫ್ನ ಆರಂಭ ಭಾಗದಲ್ಲಿ ದಜ್ಜಾಲ್ ಜನರನ್ನು ಪರೀಕ್ಷಿಸುವ ವಿಷಯಗಳಿಗಿಂತಲೂ ದೊಡ್ಡ ಅದ್ಭುತಗಳು ಮತ್ತು ದೃಷ್ಟಾಂತಗಳಿವೆ. ಯಾರು ಅದನ್ನು ಆಳವಾಗಿ ಅಧ್ಯಯನ ಮಾಡುತ್ತಾರೋ ಅವರು ದಜ್ಜಾಲ್ನಿಂದ ಪರೀಕ್ಷಿಸಲ್ಪಡುವುದಿಲ್ಲ. ಇನ್ನೊಂದು ವರದಿಯಲ್ಲಿ ಹೀಗಿದೆ: ಸೂರಾ ಕಹ್ಫ್ನ ಕೊನೆಯ ಹತ್ತು ವಚನಗಳು. ಅಂದರೆ "ಸತ್ಯನಿಷೇಧಿಗಳು ಸ್ವೀಕರಿಸಬಹುದೆಂದು ಭಾವಿಸಿದ್ದಾರೆಯೇ..." ಎಂಬಲ್ಲಿಂದ ಪ್ರಾರಂಭವಾಗುವ ವಚನಗಳು.

http://www.sunnah.global/hadeeth/kn/show/6265